ತಾಳಿಯಂಭಾಗ್ಯ ಯೋಜನೆಯಲ್ಲಿ ಉಪಯೋಗವಾಗಿರುವ ಚಿನ್ನದ ಬಗ್ಗೆ

೧೨೨ (೧೮೪) ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಕುಷ್ಟಗಿ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿ ತಾಳಿಯ ಭಾಗ್ಯ ಯೋಜನೆ ಪ್ರಾರಂಭವಾದಗಿನಿಂದ ಇಲ್ಲಿಯವರೆವಿಗೆ ಎಷ್ಟು ಜನ ಮಹಿಳೆಯರು ಅನುಕೂಲ ಪಡೆದಿರುತ್ತಾರೆ ?

ಆ) ತಾಳಿ ನಿರ್ಮಾಣದಲ್ಲಿ ಚಿನ್ನದ ಉಪಯೋಗ ಮಾಡಿರುವ ಪ್ರಮಾಣವೆಷ್ಟು ?

ಇ) ಸರ್ಕಾರಕ್ಕೆ ಈ ಯೋಜನೆಗಾಗಿ ಬಂದಿರುವ ಹಣದ ವೊತ್ತವೆಷ್ಟು ? ಹಾಗೂ ಚಿನ್ನದ ಪ್ರಮಾಣವೆಷ್ಟು ?

ಈ) ತಾಳಿಯ ಭಾಗ್ಯ ಯೋಜನೆಯ ವ್ಯಾಪ್ತಿಯಲ್ಲಿ ಯಾರಾದರೂ ಶಾಸಕರಿಗೆ ಅನುಕೂಲ ದೊರೆತಿದೆಯೇ ?

ಉ) ಪ್ರತಿ ಜಿಲ್ಲೆಯಲ್ಲಿ ತಾಳಿಯ ಭಾಗ್ಯ ಯೋಜನೆಯ ಅನುಷ್ಠಾನಕ್ಕಾಗಿ ಆಗಿರುವ ವೆಚ್ಚ ವೆಷ್ಟು ? ಹಾಗೂ ಬಂದಿರುವ ತೊಂದರೆಯೇನು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಈವರೆವಿಗೂ ೭೨೧೪ ಮಹಿಳೆಯರು ಅನುಕೂಲ ಪಡೆದಿರುತ್ತಾರೆ.

ಆ) ತಾಳಿಗೆ ಒಂದು ಗ್ರಾಂ ೨೨ ಕ್ಯಾರೆಟ್ ಚಿನ್ನ ಉಪಯೋಗಿಸಲಾಗುವುದು.

ಇ) ಈಯೋಜನೆ ರಾಜ್ಯ ಸರ್ಕಾರದ್ದು ಸರ್ಕಾರಕ್ಕೆ ಈ ಯೋಜನೆಗಾಗಿ ಹಣ ಹಾಗೂ ಚಿನ್ನ ಬಂದಿರುವುದಿಲ್ಲ.

ಈ) ಶಾಸಕರು ಈ ಯೋಜನೆಯ ಲಾಭ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಉ) ಈ ಯೋಜನೆಯಲ್ಲಿ ಪ್ರತಿ ಜಿಲ್ಲೆಯಲ್ಲಿ ಆಗಿರುವ ವೆಚ್ಚವನ್ನು ಅನುಬಂದ 'ಅ' ನಲ್ಲಿ ಕೊಡಲಾಗಿದೆ. ಈ ಯೋಜನೆಯಲ್ಲಿ ತೊಂದರೆ ಏನೂ ಕಂಡು ಬಂದಿಲ್ಲ.

ಅನುಬಂಧ ಎ

ತಾಳಿಯ ಭಾಗ್ಯ ಯೋಜನೆಯಡಿಯಲ್ಲಿ ಜಿಲ್ಲಾವಾರು ಖರ್ಚಾಗಿರುವ ಹಣ

ಕ್ರಮ ಸಂಖ್ಯೆ	ಜಿಲ್ಲೆ	15-8-85 ರಿಂದ 31-3-86 ರವರೆಗೆ		1-4-86 ರಿಂದ 31-3-87 ರವರೆಗೆ		1-4-87 ರಿಂದ 31-7-87 ರವರೆಗೆ	
		ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ	ಸಂಖ್ಯೆ	ಮೊತ್ತ
							ರೂ. ಪೈ.
1	ಬೆಂಗಳೂರು (ನಗರ)	—	—	—	—	—	—
2	ಬೆಂಗಳೂರು (ಗ್ರಾಮಾಂತರ)	60	20,000-00	165	91,924-00	73	28,500-00
3	ಮಂಡ್ಯ	ನಿಲ್ಲ	ನಿಲ್ಲ	12	4,403-00	10	4,750-00
4	ಮೈಸೂರು	179	62,650-00	96	35,129-50	**	**
5	ಕೊಡಗು	ನಿಲ್ಲ	ನಿಲ್ಲ	26	9,100-00	**	15,920-00
6	ಮಂಗಳೂರು	27	28,970-00	29	11 639-20	**	**
7	ಕಾರವಾರ	347	1,24,428-00	235	1,24,936-80	**	**
8	ಚಿಕ್ಕಮಗಳೂರು	36	—	90	33,387-00	114	32,769-00
9	ತುಮಕೂರು	ನಿಲ್ಲ	ನಿಲ್ಲ	ನಿಲ್ಲ	ನಿಲ್ಲ	72	27,366 00
10	ಕೋಲಾರ	ನಿಲ್ಲ	ನಿಲ್ಲ	183	69,769 00	306	1,17,000 00
11	ಚಿತ್ರದುರ್ಗ	ನಿಲ್ಲ	ನಿಲ್ಲ	30	13,116-00	24	**
12	ಬಿಜಾಪುರ	11	3,850-00	ನಿಲ್ಲ	ನಿಲ್ಲ	ನಿಲ್ಲ	ನಿಲ್ಲ
13	ಶಿವಮೊಗ್ಗ	226	84,960-00	514	1,59,944-00	164	68,563-00
14	ಬಳ್ಳಾರಿ	40	16,196-00	215	46,671-10	15	6.975-00
15	ಬೆಳಗಾಂ	158	25,930-70	127	44,450-00	43	15,050-00
16	ಧಾರವಾಡ	1346	4,82,864-65	1026	4,14,614-25	796	3,01,748-15
17	ಗುಲ್ಬರ್ಗಾ	ನಿಲ್ಲ	ನಿಲ್ಲ	ನಿಲ್ಲ	ನಿಲ್ಲ	ನಿಲ್ಲ	ನಿಲ್ಲ
18	ರಾಯಚೂರು	143	55,331-80	89	36,722-00	61	**
19	ಬೀದರ್	ನಿಲ್ಲ	ನಿಲ್ಲ	ನಿಲ್ಲ	ನಿಲ್ಲ	10	3,500-00
20	ಹಾಸನ	ನಿಲ್ಲ	ನಿಲ್ಲ	116	46,408-06	—	—
	ಒಟ್ಟು	2573	9,00,205-75	2953	11,41,217-20	1688	6,20,141-15

ಟಿಪ್ಪಣಿ : ** ಮಾಹಿತಿಯು ಬಂದಿಲ್ಲ